ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ
ನ್ಯಾಯಾಧೀಶರ ನ್ಯಾಯಾಲಯ, ಹಾಸನ

ಸ್ಪೆಷಲ್ ಕೇಸ್ ನಂಃ **205/2023**

| | ಚಾಸಾಃ 7 | ಅಸಾಃ 7 |
|---|---|---|
| ಹೆಸರು | ಉಷಾ ಸಿ ಎನ್ | |
| ಗಂಡನ ಹೆಸರು : | ಮಂಜುನಾಥ ಡಿ ಎ | |
| ವಯಸ್ಸು: | 40 ವರ್ಷ | |
| ಕೆಲಸಃ | ವಿದ್ಯುತ್ ಪರಿವೀಕ್ಷಕರು | |
| ವಾಸಸ್ಥಳ | ಬೆಂಗಳೂರು | |

ದಿನಾಂಕಃ **24/09/2025** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಸ್‌ಪಿಪಿ ರವರಿಂದ

ನಾನು ಜನವರಿ 2020 ರಿಂದ ಜುಲೈ 2023 ರವರೆಗೆ ಎಲೆಕ್ಟ್ರಿಕಲ್ ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ. 17.10.2019 ರಂದು ಹಾಸನದ ಉಪ ವಿದ್ಯುತ್ ಪರಿವೀಕ್ಷಕರು ಸದರಿ ವಿದ್ಯುತ್ ಅಪಘಾತದ ತನಿಖೆಯನ್ನು ನಡೆಸಿ ನನಗೆ ವರದಿಯನ್ನು ನೀಡಿರುತ್ತಾರೆ. ಆ ವರದಿಯ ಅನುಸಾ ದಿ. 26.02.2020 ರಂದು ನಾನು ತನಿಖಾಧಿಕಾರಿಯವರಿಗೆ ವರದಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-6 ಎಂದು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಈ ವರದಿಯಲ್ಲಿ ಚಿಕ್ಕೇಗೌಡ ಬಿನ್ ಅಣ್ಣಪ್ಪಗೌಡ ವಿದ್ಯುತ್ ಅಪಘಾತ ಅಟ್ಟಾವರ ಗ್ರಾಮದ ವ್ಯಾಪ್ತಿಯಲ್ಲಿ 100 ಕೆ ವಿ ಪರಿವರ್ತಕ ಕೇಂದ್ರದ ಎಳೆಯಲಾಗಿದ್ದ ಎಲ್ ಟಿ ಮಾರ್ಗದಿಂದ ಒಂದು ಫೇಸ್ ವಾಹಕವವು ದುರ್ಬಲಗೊಂಡಿದ್ದ ಭಾಗದಲ್ಲಿ ತುಂಡಾಗಿ ಅದು ರಸ್ತೆಯಲ್ಲಿ ನೇತಾಡುತ್ತಿದ್ದು, ಅದೇ ಮಾರ್ಗದಲ್ಲಿ ನಡೆದುಕೊಂಡು ಹೋಗುತ್ತಿದ್ದ ಶ್ರೀ ಚಿಕ್ಕೇಗೌಡರ ರವರು ಸದರಿ ತುಂಡಾದ ಹಾಗೂ ಚೇತನ ವ್ಯವಸ್ಥೆಯಲ್ಲಿದ್ದ ವಾಹಕಕ್ಕೆ ಸಂಪರ್ಕಗೊಂಡ ವಿದ್ಯುತ್ ಶಾಕ್ ಗೆ ಒಳಗೊಂಡು ಗಾಯಗೊಂಡಿರುತ್ತಾರೆ ಎಂದು ತಿಳಿದು ಬಂದಿರುತ್ತದೆ.

ಸದರಿ ಅಪಘಾತದಲ್ಲಿ ವಿದ್ಯುತ್ ಸರಬರಾಜುಗಾರರ ತಮ್ಮ ಕಾರ್ಯವ್ಯಾಪ್ತಿಯಲ್ಲಿದ್ದ ವಿದ್ಯುತ್ ಮಾರ್ಗಗಳನ್ನು ಆಗಾಗ ಪರಿಶೀಲನೆಗೊಳಿಸಿ ಹಳೆಯದಾದ ಹಾಗೂ ದುರ್ಬಲಗೊಂಡಿದ್ದ ವಾಹಕಗಳನ್ನು ಬದಲಾಯಿಸಿ ವಿದ್ಯುತ್ ವ್ಯವಸ್ಥೆಯನ್ನು ಸುಸ್ಥಿತಿಯಲ್ಲಿ ನಿರ್ವಹಣೆ ಮಾಡಿದ್ದರೆ ಸದರಿ ಅಪಘಾತವನ್ನು ತಪ್ಪಿಪಿಸಬಹುದಿತ್ತು. ಆಗಾಗಿ ನಾನು ಸೆಂಟ್ರಲ್ ಎಲೆಕ್ಟ್ರಿಸಿಟಿ ಆಥಾರಿಟಿ ಮೆಷರಸ್ ರಿಲೇಟಿಂಗ್ ಟು ಸೇಫ್ಟಿ ಮತ್ತು ಎಲೆಕ್ಟ್ರಿಕ್ ಸಪ್ಲೇ ರೆಗ್ಯುಲೆಷನ್ 12(1) ರ ಉಲ್ಲಂಘನೆಯಾಗಿರುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

ವೈರ್ ನೇತಾಡುತ್ತಿತು ಎಂದು ಪೊಟೋ ಮತ್ತು ಸಿಡಿಯು ವರದಿ ಜೊತೆ ಇರುವುದಿಲ್ಲ, ಆದರೆ ನಕ್ಷೆಯನ್ನು ತಯಾರು ಮಾಡಿರುತ್ತಾರೆ. ಅಟ್ಟಾವರ ಗ್ರಾಮದ ಮಣ್ಣಿನ ರಸ್ತೆಯಲ್ಲಿ ವಿದ್ಯುತ್ ವೈರ್ ನೇತಾಡುತ್ತಿತ್ತು. ನಕ್ಷೆಯ ಪ್ರಕಾರ ರಸ್ತೆಯ ಬಲಭಾಗದಲ್ಲಿ ವೈರ್ ನೇತಾಡುತ್ತಿತ್ತು. ಗ್ರಾಮಕ್ಕೆ ಹೋಗಿದ್ದ ಬಗ್ಗೆ ಗ್ರಾಮಸ್ಥರ ಸಹಿ ಪಡೆದ್ದೀರಾ ಎಂದರೆ ತನಿಖಾಧಿಕಾರಿಗಳು ಜಯಣ್ಣ ಬಿನ್ ಹೊನ್ನೇಗೌಡ, ಚಿಕ್ಕೇಗೌಡ ರ ಹೇಳಿಕೆ ಪಡೆದಿರುತ್ತಾರೆ. ಅದನ್ನು ಕೊಟ್ಟಿರುವುದಿಲ್ಲ. ಗಾಯಾಳುವಿನ ಹೇಳಿಕೆಯನ್ನು ಪಡೆದಿರುತ್ತೇವೆ. ಅದನ್ನು ನನಗೆ ಮಾತ್ರ ಕೊಟ್ಟಿರುತ್ತಾರೆ, ನ್ಯಾಯಾಲಯಕ್ಕೆ ಕೊಟ್ಟಿರುವುದು ಗೊತ್ತಿಲ್ಲ.

ವಾಹಕವು ಸುಟ್ಟಿರುವ ಬಗ್ಗೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಗ್ರಾಮಸ್ಥರು ವೈರ್ ಹಳೆಯದಾಗಿದೆ, ಇದು ದುರ್ಬಲಗೊಂಡಿದೆ ಎಂದೆ ಕೆಇಬಿಯವರಿಗೆ ದೂರು ಕೊಟ್ಟಿದ್ದಾರಾ ಎಂದರೆ ಗೊತ್ತಿಲ್ಲ. ನೆಲಮಟ್ಟದಿಂದ ವೈರ್ ಎಷ್ಟು ದೂರದಲ್ಲಿ ನೇತಾಡುತ್ತಿತು ಎಂದು ವರದಿಯಲ್ಲಿ ನಮೂದು ಮಾಡಿಲ್ಲ. ತನಿಖಾಧಿಕಾರಿಯವರು ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪ್ರು.,

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ